ಇಳಿಬಿಟ್ಟಿದ್ದ ಕಪ್ಪು ಬಿಳೀ ಕೂದಲನ್ನು ಒಟ್ಟುಮಾಡಿ ಕಟ್ಟಿಕೊಂಡಿದ್ದ. ಮುಖದ ತುಂಬ ಸಾಲ್ಟ್ ಅಂಡ್ ಪೆಪ್ಪರ್ ಗಡ್ಡ ಹಾಗೂ ಕನ್ನಡಕದ ಹಿಂದಿದ್ದ ತೀಕ್ಷ್ಣ ಕಣ್ಣುಗಳು. ಎದುರಿನ ಕುರ್ಚಿಯಲ್ಲಿ ಕುಳಿತು ಕಾಟೇ ಕೇಳಿದ.. 'ಆ ಮ್ಯಾಗಜೈನಿಗೆ ಫೋಟೊ ತೆಗೆಯುವುದು ನಿಲ್ಲಿಸಿದೆಯಾ?'. ಅವನ ಈ ಪ್ರಶ್ನೆ ಅರ್ಥಮಾಡಿಕೊಂಡು ಉತ್ತರಿಸಲಿಕ್ಕೆ ನನಗೆ ಸ್ವಲ್ಪ ಸಮಯವಾಯಿತು. ಸುಮಾರು ಆರೇಳು ವರ್ಷಗಳ ಹಿಂದಿನ ನಮ್ಮ ವಿನಿಮಯವನ್ನು ನೆನಪಿಟ್ಟುಕೊಂಡು ನೆನ್ನೆಯೇ ಮಾತನಾಡಿದಂತೆ ಅವನು ಕೇಳಿದ. ಕೆಲವು ವರ್ಷಗಳ ಹಿಂದೆ ನಾನು ಮ್ಯೂಸಿಕ್ ಮ್ಯಾಗಜೈನ್ ಒಂದಕ್ಕಾಗಿ ಸಂಗೀತಗಾರರ ಫೋಟೊಗಳನ್ನು ತೆಗೆಯುತ್ತಿದ್ದೆ. ತೆಗೆದ ನಂತರ ಮ್ಯಾಗಜೈನಿಗೆ ಕಳಿಸಿದಾಗ ಛಾಯಾಗ್ರಹಣದ ಸೂಕ್ಷ್ಮಗಳನ್ನು ಎಳ್ಳಷ್ಟೂ ತಿಳಿಯದ ಅತ್ಯಂತ ಅರಸಿಕರಿಗೆ ಕೊಡಬೇಕಾಯಿತಲ್ಲಾ ಎಂದು ಬೇಸರಿಸಿ ಕಾಟೇ ಹತ್ತಿರ ಗೋಳಾಡಿದ್ದೆ. ಅದಕ್ಕೆ ಕಾಟೇ ಮ್ಯಾಗಜೈನ್ ಸಮಾಚಾರ ಬಿಟ್ಟುಬಿಡು ಎಂದು ಖಡಾಖಂಡಿತವಾಗಿ ಹೇಳಿದ್ದ. 'ಹಾ ಹೌದು, ನಿಲ್ಲಿಸಿಬಿಟ್ಟೆ..' ಎಂದು ಹೇಳಿದಾಗ ಕಾಟೇಗೆ ನಿರಾಳವಾಯಿತು. 'ನಿಮ್ಮ ಕ್ಯಾಮೆರಾ ಎಲ್ಲಿ?' ಎಂದು ಕೇಳಿದೆ. ತಂದಿಲ್ಲವೆಂದು ಹೇಳಿ, ತಾನು ಇತ್ತೀಚೆಗೆ ಫೋಟೊ ತೆಗೆಯುತ್ತಿಲ್ಲವೆಂದು ಹೇಳಿದ.

ಜೇಬಿನಲ್ಲಿದ್ದ ತಂಬಾಕಿನ ಪೊಟ್ಟಣವನ್ನು ಕೈಯಲ್ಲಿ ಹಿಡಿದು ಸ್ಮೋಕಿಂಗ್ ರೂಮಿಗೆ ಹೋಗೋಣವೆಂದು ಹೇಳಿದ. ಮೊದಲನೆಯ ಮಹಡಿಯ ಇಕ್ಕಟ್ಟಾದ ರೂಮಿನೊಳಗೆ ಹೋದೆವು. ರೂಮಿನ ಗಾಜಿನ ಕಿಟಕಿಗಳ ಮೂಲಕ ಬಾರಿಗೆ ಜನ ಬಂದು ಸೇರುತ್ತಿದ್ದುದು ಕಂಡಿತು. ಗಿಟಾರ್ ಹಾಗೂ ಪಿಯಾನೊ ವಾದಕರು ಸೌಂಡ್ ಚೆಕ್ ಮಾಡುತ್ತಿದ್ದರು. ಬಂದ ಜನ ಬಾರ್ ಕೌಂಟರಿನಿಂದ ಬಿಯರ್ ಹಾಗೂ ವೈನ್ ಕೊಂಡು, ಗ್ಲಾಸುಗಳನ್ನು ಹಿಡಿದು ಜಾಗವಿದ್ದ ಕಡೆ ಕೂರುತ್ತಿದ್ದರು.

ಫೋಟೊ ಯಾಕೆ ತೆಗೆಯುತ್ತಿಲ್ಲ ಎಂದು ಕೇಳಿದೆ. ಕಾಟೇ ತಂಬಾಕಿನ ಪೊಟ್ಟಣವನ್ನು, ರೋಲಿಂಗ್ ಪೇಪರನ್ನು ತೆಗೆದು ಎದುರಿನ ಹಲಗೆಯ ಮೇಲಿಟ್ಟ. ಪೇಪರನ್ನು ಸುರುಳಿ ಮಾಡಿ, ಮೆಲ್ಲಗೆ ಅಂಚುಗಳನ್ನು ನಾಲಿಗೆಯಿಂದ ಒದ್ದೆಮಾಡಿ ನಂತರ ಅದರ ಮೇಲೆ ಒಂದಿಷ್ಟು ತಂಬಾಕನ್ನು ಹಾಕಿದ. ನಂತರ ಅದರ ಒಂದು ತುದಿಗೆ ಚಿಕ್ಕ ಫಿಲ್ಟರ್ ಸಿಕ್ಕಿಸಿ ಮತ್ತೆ ಸುರುಳಿ ಮಾಡಿ, ಬೆಂಕಿಕಡ್ಡಿ ಗೀರಿ ಹತ್ತಿಸಿದ. ಕಣ್ಣು ಮುಚ್ಚಿ ಒಂದು ದೀರ್ಘವಾದ ದಮ್ ಎಳೆದಾಗ ಪಿಯಾನೊ ಹಾಗೂ ಡ್ರಮ್ಸ್ ಕೇಳಿತು. ಕಛೇರಿ ಶುರುವಾಗಿತ್ತು. ಅಮೆರಿಕಾದ ಜಾಝ್ ಮಾಂತ್ರಿಕ ಜಾನ್ ಸ್ಕೋಫೀಲ್ಡ್ ನೆನಪಿನ ಕಛೇರಿಯಾಗಿದ್ದು ಅವನ ಸಂಯೋಜನೆಗಳನ್ನು ಹಾಡುತ್ತಿದ್ದರು. 'ತೀರ ಉತ್ಕಟವಾಗಿ ಮಾಡಲು ಸಾಧ್ಯವಾಗುವ ತನಕ ಮಾಡಬೇಕು, ಅಮೇಲೆ ಬಿಟ್ಟುಬಿಡಬೇಕು' ಎಂದು ಹೇಳಿ ಕಾಟೇ ಮತ್ತೊಂದು ದಮ್ ಎಳೆದ. ದಿಲ್ಲಿಗೆ ಬಂದು ಎಷ್ಟು ವರುಷವಾಯಿತೆಂದು ಕೇಳಿದೆ. ಅದಕ್ಕವನು ಏನೋ ಬಡಬಡಿಸುತ್ತಾ ಸರಿಯಾಗಿ ಗೊತ್ತಿಲ್ಲವೆಂದು ಹೇಳಿದ. ಹುಟ್ಟಿದ್ದು ಪುಣೇದಲ್ಲಿ, ಅಲ್ಲಿ ಆರ್ಕಿಟೆಕ್ಚರ್ ಓದಿ ಕೆಲಸಕ್ಕೆ ದಿಲ್ಲಿಗೆ ಬಂದ ಕತೆ ಹೇಳಿದ. ಕಾಟೇಯ ಮಾತುಗಳಲ್ಲಿ ದಿನಾಂಕ, ಇಸ್ವಿಗಳು ಅಸ್ಪಷ್ಟ. ಯಾವುದೋ ಜನಪದ ಕತೆಯ ಬಿಡಿ ಉಪಕತೆಗಳಂತೆ ಅವನ ಮಾತುಗಳು ಹೊರಳುತಿದ್ದಾಗ ನನಗೆ ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ'ದ ಕಾಲಾತೀತ ನಾಗ್ಡೋ ಬೇತಾಳ ನೆನಪಾದ.

ಪುಣೆಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗ ಒಮ್ಮೆ ಭೀಮಸೇನ್ ಜೋಶಿ ಅವರ ಮನೆಗೆ ಅವರ ಪ್ರಾತಃಕಾಲದ ರಿಯಾಜ್ ನೋಡಲು ಹೋದ ಕತೆಯೊಂದನ್ನು ಹೇಳಿದ. ಕೇಳಲು ಬಂದಿದ್ದ ನಾಲ್ಕೈದು ಮಂದಿ ಜನರ ನಡುವೆ ಸುಮಾರು ಎಂಟು ವರುಷದ ಹುಡುಗನೂ ಇದ್ದ. ಜೋಶಿಯವರು ಲಲಿತ್ ರಾಗದಲ್ಲಿ ಸುದೀರ್ಘವಾಗಿ ಆಲಾಪ್ ಮಾಡಿ ಮುಗಿಸಿದಾಗ ದೂರದಲ್ಲಿ ಕೂತಿದ್ದ ಆ ಹುಡುಗ ತಡೆಯಲಾಗದೆ ಬಿಕ್ಕುತ್ತಿದ್ದ. ಅದನ್ನು ಗಮನಿಸಿದ್ದ ಜೋಶಿಯವರು ಹತ್ತಿರ ಬಂದು ಅವನ ತಲೆಯ ಮೇಲೆ ಕೈಯಾಡಿಸಿ ತಬ್ಬಿಕೊಂಡರು. 'ಆ ಹುಡುಗ ಈಗ ಎಲ್ಲಿದ್ದಾನೆ? ಯಾವ ಊರಿನಲ್ಲಿ, ಯಾವ ಆಫೀಸಿನಲ್ಲಿ ದುಡಿಯುತ್ತಿದ್ದಾನೆ?' ಕಾಟೇ ಬೇತಾಳ ನನ್ನನ್ನು ಕೇಳಿದ. ಬಾರಿನಲ್ಲಿ ಜನರು ಕಿಕ್ಕಿರಿದು, ಒಬ್ಬರ ಮೇಲೊಬ್ಬರಂತೆ ಕೂತು ಸಂಗೀತವನ್ನು ಕೇಳುತ್ತಿದ್ದರು. ಕಾಟೇ ಬೇತಾಳ ಇದ್ದಕಿದ್ದಂತೆ ಮಾಯವಾಗಿ ಕೆಲ ನಿಮಿಷದ ನಂತರ ಎರಡು ವಿಸ್ಕಿ ಗ್ಲಾಸನ್ನು ಹಿಡಿದು ಪ್ರತ್ಯಕ್ಷವಾದ. ಗಿಟಾರ್, ಪಿಯಾನೊ ಹಾಗೂ ಡ್ರಮ್ಸ್ ನುಡಿಸುತ್ತಿದ್ದವರಿಗೂ, ನಮಗೂ ಸ್ಮೋಕಿಂಗ್ ರೂಮಿನ ತೆಳುವಾದ ಗಾಜಿನ ಗೋಡೆಯ ಅಂತರವಿದ್ದರಿಂದ ಅಲ್ಲಿಗೂ, ಇಲ್ಲಿಗೂ ಒಂದು ವಿಚಿತ್ರ ನಿರ್ಲಿಪ್ತತೆಯಿತ್ತು. ನೆರೆದಿದ್ದ ಜನರ ಗುಂಪಿನಿಂದ ಒಂದೊಂದು ಮುಖಗಳನ್ನು ಕಣ್ಣಿನಲ್ಲೇ ತೋರಿಸಿ ಮತ್ತೆ ಅವರವರ ಕತೆಗಳಿಗೆ ಜಾರುತ್ತಿದ್ದ. ವಿಸ್ಕಿಯ ಮತ್ತಿನಲ್ಲಿದ್ದ ನಮಗೆ ಸಮಯದ ಪರಿವೆಯೇ ಇರಲಿಲ್ಲ. ಒಮ್ಮೆ ತಿರುಗಿ ನೋಡಿದಾಗ ಕಾಟೇ ಬೇತಾಳ ಮತ್ತೆ ಮಾಯವಾಗಿದ್ದ. ಏನೂ ತೋಚದೆ ರೂಮಿನಿಂದ ಎದ್ದು ಹೊರಗೆ ಬಂದೆ. ಬಾರ್ ಕೌಂಟರಿನಲ್ಲಿ ನೆರೆದಿದ್ದ ಹತ್ತಾರು ಜನರ ನಡುವೆ ಕಾಟೇಯನ್ನು ಹುಡುಕಲು ಅಸಾಧ್ಯವಾಯಿತು. ಕೆಳಗೆ ಇಳಿದು ಕಛೇರಿ ನಡೆಯುತ್ತಿದ್ದ ಜಾಗಕ್ಕೆ ಬಂದು ಮತ್ತೆ ಹತ್ತಾರು ಜನರ ನಡುವಿನ ನೂಕುನುಗ್ಗಲಲ್ಲಿ ನಿಂತೆ.



ಕಂಡಿದ್ದು ಸಾಕಾಗಿ ಕಾಣದ್ದು ಬೇಕಾಗಿ...

ಜಾಝ್ ಬ್ಯಾಂಡಿನ ಸದಸ್ಯರ ಪರಸ್ಪರ ಸಂಘರ್ಷದಿಂದಲೇ ಅವರ ಸಂಗೀತ ಅನನ್ಯವಾಗಿ ಹೊಮ್ಮುತ್ತಿತ್ತು. ದೂರದಲ್ಲಿದ್ದ ಸೌಂಡ್ ಸಿಸ್ಟಮ್ಮಿನ ಬಳಿ ಕಾಟೇ ತನ್ನ ದಿವ್ಯವಾದ ಏಕಾಂತದಲ್ಲಿ ಮೈಮರೆತು ಸಂಗೀತವನ್ನು ಆಸ್ವಾದಿಸುತ್ತಿರುವುದು ಕಂಡಿತು. ಯಾವುದೋ ಬೇರೊಂದು ಲೋಕದಲ್ಲಿದ್ದ ಅವನ ಬಳಿ ಮತ್ತೆ ಹೋಗುವುದು ಬೇಡವೆನ್ನಿಸಿ ದೂರದಿಂದಲೇ ಹೋಗಿಬರುತ್ತೇನೆಂದು ಕೈಮಾಡಿದೆ. ಅವನು ಆಗಲಿ ಎನ್ನುವಂತೆ ತಲೆದೂಗಿದ. ಜಾಝ್ ಬಾರಿನ ಹೊರಗೆ ಬೀದಿ ನಾಯಿಗಳು ನಿರಮ್ಮಳವಾಗಿ ಮಲಗಿ ಮೈಮುರಿಯುತ್ತಿದ್ದವು. ಅಲ್ಲೇ ಹಾದು ಹೋಗುತ್ತಿದ್ದ ಆಟೋವೊಂದನ್ನು ಕರೆದು ಮನೆಯ ದಾರಿ ಹಿಡಿದೆ.

### ಅರ್ಥಕ್ಕೆ ನಿಲುಕದ ಬಂಧ

ಮಾರನೆಯ ದಿನ ಮುಂಜಾನೆ ಆರಕ್ಕೆಲ್ಲ ಮೆಹ್ರೌಲಿ ಆರ್ಕಿಯಾಲಾಜಿಕಲ್ ಪಾರ್ಕಿಗೆ ವಾಕ್ ಹೋಗೋಣವೆಂದು ಮಂದೀಪ್ ಹೇಳಿದ್ದರಿಂದ ತಯಾರಾಗಿ ಮನೆಯ ಪೋರ್ಟಿಕೊದಲ್ಲಿದ್ದ ಪಾಟಿನ ಗಿಡಗಳನ್ನು ನೋಡುತ್ತಾ ಕಾಯುತ್ತಿದ್ದೆ. ಪಾಟಿನ ಸಂದಿಯಲ್ಲಿ ಮಲಗಿದ್ದ ಬೆಕ್ಕು ತಕ್ಷಣ ಎದ್ದು ನನ್ನನ್ನು ಗುರುತಿಸಿತು. ಈ ಬಾರಿ ತೀರಾ ಅನುಮಾನಿಸದೆ ಹತ್ತಿರ ಹೋಗಲು ಬಿಟ್ಟಿತ್ತು. ಅಷ್ಟರಲ್ಲಿ ಮಂದೀಪ್ ಹೊರಗೆ ಬಂದು ಹೋಗೋಣವೆಂದು ಹೇಳಿದ. ಮೆಹ್ರೌಲಿ, ನಾವಿದ್ದ ವಸಂತ್ ಕುಂಜಿನಿಂದ ಸುಮಾರು ಇಪ್ಪತ್ತು ನಿಮಿಷದ ವಾಕ್ ಎಂದು ಮಂದೀಪ್ ಹೇಳಿದ. ಪಾರ್ಕಿನ ಒಳಗೆ ಹೋದ ತಕ್ಷಣ ಕಂಡಿದ್ದು ರಾಶಿ ರಾಶಿಯಾಗಿ ಬಿಟ್ಟಿದ್ದ ಗುಲಾಬಿಯ ಹೂತೋಟ. ಕೆಂಪು ಹಳದಿ ಬಿಳಿ ಇತ್ಯಾದಿ ಬಣ್ಣದ ಸಾಲು ಸಾಲು ಗುಲಾಬಿ ಗಿಡಗಳಿದ್ದವು. ಗುಲಾಬಿ ತೋಟದವನ್ನು ಹಾದು ಮುಂದಕ್ಕೆ ಸಣ್ಣ ಗುಡ್ಡವೊಂದನ್ನು ಹುಡುಕಿಕೊಂಡು ಮಂದೀಪ್ ಹೊರಟ.

ಗುಡ್ಡದ ಮೇಲಿಂದ ಕುತುಬ್ ಮಿನಾರ್ ಕಾಣುತ್ತಿತ್ತು. ಸುತ್ತಲೂ ಬೆಳೆದು ನಿಂತಿದ್ದ ಕೀಕಡ್ ಮರಗಳ ನಡುವೆ ಎದ್ದು ನಿಂತಂತೆ ಕಾಣುತ್ತಿದ್ದ ಕುತುಬ್ ಮಿನಾರಿನ ಫೋಟೊ ತೆಗೆದೆ. ಮಂದೀಪ್ ಅಷ್ಟರಲ್ಲಾಗಲೇ ಗುಡ್ಡ ಇಳಿಯುತ್ತಿದ್ದ. ಏನನ್ನೋ ಹುಡುಕುತ್ತಿದ್ದವನಂತೆ ಅಲ್ಲಿಲ್ಲಿ ಕಣ್ಣುಹಾಯಿಸುತ್ತಿದ್ದ. ಮುಂದೇನು ಎಂದು ಕೇಳಿದಾಗ ಜಮಾಲೀ ಕಮಾಲೀ ಎಂಬ ಹೆಸರನ್ನು ಹೇಳಿದ. ಸ್ವಲ್ಪ ದೂರ ನಡೆದು ಅಲ್ಲೇ ಇದ್ದ ಸೆಕ್ಯೂರಿಟಿ